



# ಸುದ್ದಿ-ಸಂಚಾರಿ

ಇದು ನಮ್ಮೂರ ಸುದ್ದಿ ವಾಹಿನಿ


**ರಾಜಿನಾಮೆ**

ಟಿ.ರಾಜು ದಂಪತಿ ಬಿಜೆಪಿಗೆ ರಾಜಿನಾಮೆ ಸಲ್ಲಿಕೆ


ಸೋಮವಾರ,20ನೇ ಮೇ,2024 | ● ಸಂಪುಟ-1 | ● ಸಂಚಿಕೆ-82 | ● ಉಚಿತ | ● | ● www.suddisanchaari.in




ಶಿವಮೊಗ್ಗದ ವಿವಿಧ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಪೊಲೀಸ್ ರು ಕಾಲ್ನಡಿಗೆ ಗಸ್ತು ತಿರುಗಿದರು.

## ಯೋಧ ಸಾವು

ಸುದ್ದಿ ಸಂಚಾರಿ | ಚೆನ್ನೈ

ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆಯಲ್ಲಿ (ಸಿಐಎಸ್‌ಎಫ್) ಕಾರ್ಯನಿರ್ವಹಿಸುತ್ತಿದ್ದ ಬೆಂಗಳೂರಿನ ಯೋಧರೊಬ್ಬರು ಶನಿವಾರ ತಮಿಳುನಾಡಿನಲ್ಲಿ ಗುಂಡು ತಗುಲಿ ಮೃತಪಟ್ಟಿದ್ದಾರೆ.

ರವಿಕಿರಣ್(37) ಮೃತಪಟ್ಟ ಯೋಧ. ಕಲ್ಪಕಂನಿಂದ ತಮ್ಮ ತವರೂರು ಬೆಂಗಳೂರಿಗೆ ಶನಿವಾರ ಬಸ್‌ನಲ್ಲಿ ಪ್ರಯಾಣಿಸುತ್ತಿದ್ದಾಗ ಈ ಅವಘಡ ಸಂಭವಿಸಿದೆ ಎಂದು ಪೊಲೀಸರು ತಿಳಿಸಿದ್ದಾರೆ.ರವಿಕಿರಣ್ ಆತ್ಮಹತ್ಯೆ ಮಾಡಿಕೊಂಡಿ ದ್ದಾರೆಯೇ ಅಥವಾ ಆಕಸ್ಮಿಕವಾಗಿ ಗುಂಡು ತಗುಲಿದೆಯೇ ಎನ್ನುವ ಬಗ್ಗೆ ತನಿಖೆ ನಡೆಯುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

**Top News** ಶಿವಮೊಗ್ಗ ಜಿಲ್ಲೆಯ ವಿವಿಧ ಠಾಣೆ ವ್ಯಾಪ್ತಿಯಲ್ಲಿ

## ಪೊಲೀಸ್ ಕಾಲ್ನಡಿಗೆ ಗಸ್ತು 62 ಪ್ರಕರಣ ದಾಖಲು

ಸುದ್ದಿ ಸಂಚಾರಿ
ಶಿವಮೊಗ್ಗ

ಜಿಲ್ಲೆಯ ವಿವಿಧ ಠಾಣೆಯ ವ್ಯಾಪ್ತಿಯಲ್ಲಿ ಪೊಲೀಸ್ ರು ಕಾಲ್ನಡಿಗೆಯ ಮೂಲಕ ವಿಶೇಷ ಗಸ್ತು ನಡೆಸುತ್ತಿದ್ದು. ಭಾನುವಾರ ನಡೆದ ಏರಿಯಾ ಡಾಮಿನೇಷನ್ ನಲ್ಲಿ ಒಟ್ಟು 62 ಪಿಟಿ ಕೇಸ್ ಗಳನ್ನ ಹಾಕಿದ್ದಾರೆ. ಶಿವಮೊಗ್ಗ ಎ ಉಪ ವಿಭಾಗ ವ್ಯಾಪ್ತಿಯ ಬೈ ಪಾಸ್ ರಸ್ತೆ, ನ್ಯೂ ಮಂಡ್ಲಿ, ಎಂ.ಕೆ.ಕೆ ರಸ್ತೆ, ಹಳೆ ಮಂಡ್ಲಿ, ಸಿ ಎಲ್ ರಾಮಣ್ಣ ರಸ್ತೆ, ಗೋಪಾಳ, ಕೆಳಗಿನ ತುಂಗಾನಗರ,ಶಿವಮೊಗ್ಗ ಬಿ ಉಪ ವಿಭಾಗ ವ್ಯಾಪ್ತಿಯ ಎ ಎ ಕಾಲೋನಿ, ಆರ್ ಟಿ ಓ ರಸ್ತೆ, ಚೌಡೇಶ್ವರಿ ಕಾಲೋನಿ, ಬೊಮ್ಮನಕಟ್ಟೆ, ಸೋಮಿನಕೊಪ್ಪ, ರಾಗಿಗುಡ್ಡ, ಕುಂಸಿಯ ಕನಕ ನಗರ. ಶಿಕಾರಿಪುರ ಉಪ ವಿಭಾಗ ವ್ಯಾಪ್ತಿಯ ಶಿಕಾರಿಪುರ ಟೌನ್ ಕೋರ್ಟ್ ವೃತ್ತ, ಅಂಬರಗೊಪ್ಪ, ಆನವಟ್ಟಿಯ ಬಸ್ ನಿಲ್ದಾಣ ಹಾಗೂ ಸೊರಬ ವೃತ್ತ, ಸಾಗರ ಉಪ ವಿಭಾಗ ವ್ಯಾಪ್ತಿಯ ಸಾಗರ ಟೌನ್ ನ ಇಂಡಸ್ಟ್ರಿಯಲ್ ಏರಿಯಾ, ಜಂಬಗಾರು, ಕಾರ್ಗಲ್ ನ ಭಟ್ಕಳ ವೃತ್ತ, ಕಾರ್ಗಲ್ ಬಜಾರ್, ಆನಂದಪುರದ ಬಸ್ ನಿಲ್ದಾಣ, ತಾಳಗುಪ್ಪ ಮತ್ತು ತೀರ್ಥಹಳ್ಳಿ ಉಪ ವಿಭಾಗ ವ್ಯಾಪ್ತಿಯ ಬಾಳೆ ಬೈಲಿನಲ್ಲಿ ಆಯಾ ಪೊಲೀಸ್ ಉಪಾಧೀಕ್ಷಕರುಗಳ ನೇತೃತ್ವದಲ್ಲಿ ಪೊಲೀಸ್ ನಿರೀಕ್ಷಕರು, ಪೊಲಿಸ್ ಉಪನಿರೀಕ್ಷಕರು ಮತ್ತು ಸಿಬ್ಬಂದಿಗಳ ತಂಡಗಳು ಕಾಲ್ನಡಿಗೆ ವಿಶೇಷ ಗಸ್ತು (Foot Patrolling) ಮತ್ತು ಠಾಣಾ ವ್ಯಾಪ್ತಿಗಳ ಹೊರ ವಲಯಗಳಲ್ಲಿ Area Domination ವಿಶೇಷ ಗಸ್ತು ಮಾಡಿ Public Nuisance ಮಾಡಿದ ಮತ್ತು ಅನುಮಾನಸ್ಪಾದ ವ್ಯಕ್ತಿಗಳ ವಿರುದ್ದ ಒಟ್ಟು 62 ಲಘು ಪ್ರಕರಣಗಳನ್ನು ದಾಖಲಿಸಿದ್ದಾರೆ.








# ಆನವಟ್ಟಿ ಪ್ರವೇಶ ಪ್ರಾರಂಭ

# ಪುರಸಭೆಯ ಸದಸ್ಯ ಟಿ.ರಾಜು ಹಾಗೂ ಪತ್ನಿ ಮಂಜುಳಾ ರಾಜು ಅವರು ಅಧಿಕೃತವಾಗಿ ಬಿಜೆಪಿ ಪಕ್ಷದ ಸದಸ್ಯತ್ವಕ್ಕೆ ರಾಜಿನಾಮೆ ಸಲ್ಲಿಸಿದ್ದಾರೆ.

**ಶಿಕಾರಿಪುರ ತಾಲ್ಲೂಕು ಬಿಜೆಪಿ ಅಧ್ಯಕ್ಷ ರಿಗೆ ತಮ್ಮ ಲೆಟರ್ ಹೆಡ್ ನಲ್ಲಿ ಇಬ್ಬರು ಪ್ರತ್ಯೇಕವಾಗಿ ರಾಜಿನಾಮೆ ಸಲ್ಲಿಸಿರುವ ಪ್ರತಿಗಳು ಸುದ್ದಿ ಸಂಚಾರಿ ಪತ್ರಿಕೆಗೆ ಲಭ್ಯವಾಗಿದೆ**



ಶ್ರೀಮತಿ ಮಂಜುಳ ಟಿ. ರಾಜು
ಅಧ್ಯಕ್ಷರು,
ಪುರಸಭೆ ಶಿರಾಳಕೊಪ್ಪ–577428
ಮೊ : 9980390290
ಶಿಕಾರಿಪುರ ತಾ॥. ಶಿವಮೊಗ್ಗ ಜಿ॥.

ಕ್ರಮ ಸಂಖ್ಯೆ : ದಿನಾಂಕ :

ಇವರಿಗೆ,
ಬಿ.ಜೆ.ಪಿ ತಾಲ್ಲೂಕು ಅಧ್ಯಕ್ಷರು.
ಶಿಕಾರಿಪುರ ತಾಲ್ಲೂಕು.

ಮಾನ್ಯರೇ.

ವಿಷಯ:– ಬಿ.ಜೆ.ಪಿ ಪಕ್ಷದ ಸದಸ್ಯತ್ವ ಸ್ಥಾನಕ್ಕೆ ರಾಜಿನಾಮೆ ನೀಡುತ್ತಿರುವ ಬಗ್ಗೆ.


*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀ ಮಂಜುಳ.ಟಿ.ರಾಜು, ಸದಸ್ಯರು, ಪುರಸಭೆ ಶಿರಾಳಕೊಪ್ಪ ಆದ ನಾನು ನನ್ನ ವೈಯಕ್ತಿಕ ಕಾರಣಗಳಿಂದಾಗಿ ಬಿ.ಜೆ.ಪಿ ಪಕ್ಷದ ಸದಸ್ಯತ್ವಕ್ಕೆ ರಾಜಿನಾಮೆಯನ್ನು ನೀಡುತ್ತಿದ್ದು ಸದರಿ ರಾಜಿನಾಮೆಯನ್ನು ಮಾನ್ಯ ಮಾಡಲು ಈ ಮೂಲಕ ಕೋರಿದೆ.

ವಂದನೆಗಳೊಂದಿಗೆ..

ತಮ್ಮ ವಿಶ್ವಾಸಿ,

(ಮಂಜುಳ.ಟಿ.ರಾಜು)



ಶ್ರೀ ಟಿ. ರಾಜು
ಸದಸ್ಯರು, ವಾರ್ಡ್ ನಂ : 1
ಪುರಸಭೆ ಶಿರಾಳಕೊಪ್ಪ.
Mob. : 9980390290

ನಂ. ದಿನಾಂಕ :.........................................

ಇವರಿಗೆ,
ಬಿ.ಜೆ.ಪಿ ತಾಲ್ಲೂಕು ಅಧ್ಯಕ್ಷರು.
ಶಿಕಾರಿಪುರ ತಾಲ್ಲೂಕು.

ಮಾನ್ಯರೇ.

ವಿಷಯ:– ಬಿ.ಜೆ.ಪಿ ಪಕ್ಷದ ಸದಸ್ಯತ್ವ ಸ್ಥಾನಕ್ಕೆ ರಾಜಿನಾಮೆ ನೀಡುತ್ತಿರುವ ಬಗ್ಗೆ.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀ ಟಿ.ರಾಜು, ಸದಸ್ಯರು, ಪುರಸಭೆ ಶಿರಾಳಕೊಪ್ಪ ಆದ ನಾನು ನನ್ನ ವೈಯಕ್ತಿಕ ಕಾರಣಗಳಿಂದಾಗಿ ಬಿ.ಜೆ.ಪಿ ಪಕ್ಷದ ಸದಸ್ಯತ್ವಕ್ಕೆ ರಾಜಿನಾಮೆಯನ್ನು ನೀಡುತ್ತಿದ್ದು ಸದರಿ ರಾಜಿನಾಮೆಯನ್ನು ಮಾನ್ಯ ಮಾಡಲು ಈ ಮೂಲಕ ಕೋರಿದೆ.

ವಂದನೆಗಳೊಂದಿಗೆ..

ತಮ್ಮ ವಿಶ್ವಾಸಿ,

(ಟಿ.ರಾಜು)


CSC ನಮ್ಮ ಇತರ ಆನ್‌ಲೈನ್ ಸೇವೆಗಳು ಸೇವಾ ಸಿಂಧು

ರೇಷನ್ ಕಾರ್ಡ್, ಪ್ಯಾನ್ ಕಾರ್ಡ್, ಲೇಬರ್ ಕಾರ್ಡ್,
ಆಧಾರ್ ಕಾರ್ಡ್, ಬೆಳೆ ವಿಮೆ, ಪಹಣಿ (RTC) ಆನ್‌ಲೈನ್ ಅರ್ಜಿ

ಡಿಜಿಟಲ್ ಸೇವಾ ಕೇಂದ್ರ– ಸಾಮಾನ್ಯ ಸೇವಾ ಕೇಂದ್ರ,
ಮುಖ್ಯ ಬಸ್ ನಿಲ್ದಾಣ, ಮಳಿಗೆ ಸಂಖ್ಯೆ 10,
ಶಿರಾಳಕೊಪ್ಪ 577428
ಮೊ: 98444 91854,
88849 34242




ಸೂಚನೆ :
ಈ–ನೆಟ್ ( ಕಿಯೋನಿಕ್ಸ್ ಕಂಪ್ಯೂಟರ್)
ಕೇಂದ್ರದ ಸೇವೆಗಳನ್ನು

Nisarga Digital shiralakoppa.
90081 34500




Top News **ಬಾಪೂಜಿ ಇನ್ಸಿಟ್ಯೂಟ್ ಆಫ್ ಪ್ಯಾರಾಮೆಡಿಕಲ್**

# ಶಿಕಾರಿಪುರ :ವಿಶ್ವ ಏಡ್ಸ್ ಲಸಿಕಾ ಜಾಗೃತಿ ದಿನ

ಸುದ್ದಿ-ಸಂಚಾರಿ
ಶಿಕಾರಿಪುರ
ಪ್ಯಾರಾಮೆಡಿಕಲ್ ಗೆ ಸೇರಿ ನೀವು ವೈದ್ಯರಂತೆ ಕಾರ್ಯನಿರ್ವಹಿಸಲು ಮುಂದಾಗಿರುವುದು ಶ್ಲಾಘನೀಯ. ನಿಮ್ಮ ಕಲಿಕಾ ಅವಧಿಯಲ್ಲಿ ಶ್ರದ್ಧೆಯಿಂದ, ಆಸಕ್ತಿಯಿಂದ, ಕಲಿತು ಸಾಧಿಸುವ ಛಲ ನಿಮ್ಮೊಂದಿಗಿದ್ದಾಗ ನೀವು ಈ ವೃತ್ತಿಯಲ್ಲಿ ಸಾರ್ವಜನಿಕರ ಜೀವ ಉಳಿಸಲು ಸಾಧ್ಯ. ಹಾಗಾಗಿ, ರೋಗ ಬರುವ ಮತ್ತು ಹರಡುವ ಮುನ್ನ ಅದರ ಅರಿವಿನ ಜಾಗೃತಿಯ ಮಾಹಿತಿ ಅಗತ್ಯವಾಗಿರುತ್ತದೆ ಎಂದು ತಹಶೀಲ್ದಾರ್ ಮಲ್ಲೇಶಪ್ಪ ಬಿ ಪೂಜಾರ್ ಅಭಿಪ್ರಾಯಸಿದರು.

ಅವರು ಬಾಪೂಜಿ ಇನ್ಸಿಟ್ಯೂಟ್ ಆಫ್ ಪ್ಯಾರಾಮೆಡಿಕಲ್ ಕಾಲೇಜಿನಲ್ಲಿ ಬಾಪೂಜಿ ಇನ್ಸಿಟ್ಯೂಟ್ ಆಫ್ ಪ್ಯಾರಾಮೆಡಿಕಲ್ ಸೈನ್ಸ್ ಹಾಗೂ ಸಾರ್ವಜನಿಕ ಆಸ್ಪತ್ರೆ ಶಿಕಾರಿಪುರ ಇವರ ಸಹಯೋಗದಲ್ಲಿ ನಡೆದ ವಿಶ್ವ ಏಡ್ಸ್ ಲಸಿಕಾ ಜಾಗೃತಿ ದಿನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.
ಆರೋಗ್ಯ ಇಲಾಖೆಯ ಸೇವೆ ಹಾಗೂ ತಾವು ಕಲಿಕಾ ವಿದ್ಯಾರ್ಥಿಗಳ ಸೇವೆ ಅತ್ಯಮೂಲ್ಯವಾಗಿರುತ್ತದೆ ಕೋವಿಡ್ ಸಂದರ್ಭದಲ್ಲಿ ನಿಮ್ಮ ಸೇವೆ ಅನನ್ಯ. ನೀವು ಈ ವೃತ್ತಿಯಲ್ಲಿ ನಿಮ್ಮನ್ನು ನೀವು ತೊಡಗಿಸಿಕೊಂಡಿರುವುದು ಮತ್ತೊಬ್ಬರ ಜೀವ ಕಾಪಾಡುವ ಪುಣ್ಯದ ಕೆಲಸಕ್ಕಾಗಿ ಅದಕ್ಕೆ ತಕ್ಕ ಹಾಗೆ ಒದು ಮತ್ತು ಕಲಿಕಾಶ್ರಮ ನಿಮ್ಮೊಂದಿಗಿರಬೇಕು ಶಿಕ್ಷಕರ ಸಹಕಾರದಿಂದ ಕಲಿತು ಯಶಸ್ವಿನ ಹಾದಿಯತ್ತ ಸಾಗಬೇಕು ಮಹಾಮಾರಿ ಏಡ್ಸ್ ನಂತಹ ರೋಗವನ್ನು ಅಂತರಾಷ್ಟ್ರೀಯ ಜಾಗತಿಕ ಮಟ್ಟದಲ್ಲಿ ಸಂಪೂರ್ಣವಾಗಿ ನಿರ್ಮೂಲನೆ ಮಾಡಬೇಕು. ಆಗ ಮಾತ್ರ ವಿಶ್ವ ಏಡ್ಸ್ ಲಸಿಕ ಜಾಗೃತಿ ದಿನವನ್ನು ಆಚರಣೆ ಮಾಡಿದ್ದು ಸಾರ್ಥಕತೆಯಾಗುತ್ತದೆ ಎಂದು ನೆರೆದ ವಿದ್ಯಾರ್ಥಿಗಳಿದೊಂದಿಗೆ ಮನವರಿಕೆ ಮಾಡಿಕೊಟ್ಟರು.
ಸರ್ಕಾರಿ ಆಸ್ಪತ್ರೆಯ ವೈದ್ಯ ಡಾ ಸುಧಾಕರ್ ಮಾತನಾಡಿ, ವಿಶ್ವ ಏಡ್ಸ್ ಲಸಿಕ ಜಾಗೃತಿಯ ಬಗ್ಗೆ ಸಂದೇಶವನ್ನು ನೀಡಿ ಈ ರೋಗ ಬರುವುದನ್ನ ತಡೆಗಟ್ಟುವ ವಿಧಾನ ಬಂದ ನಂತರವೂ ಇರುವ ಆರೈಕೆ ವಿಧಾನ ಹಾಗೂ ಅದರಿಂದ ಪಾರಾಗುವ ಮತ್ತು ದೇಹದಲ್ಲಿ ರೋಗನಿರೋಧಕ ಶಕ್ತಿಗಳು ಕಡಿಮೆಯಾಗಿ ಅದರಿಂದಾಗುವ ಅನಾಹುತಗಳ ಮಾಹಿತಿಯನ್ನು ಈ ಸಂದರ್ಭದಲ್ಲಿ ವಿದ್ಯಾರ್ಥಿಗಳಿದೊಂದಿಗೆ ಹಂಚಿಕೊಂಡರು
ಏಡ್ಸ್ ಬಂದ ರೋಗಿಗಳಿಂದ ದೂರವಿರದೆ ಅವರನ್ನು ಎಲ್ಲರಂತೆ ಬೆರೆತು ಅವರು ಖಿನ್ನತೆಗೆ ಒಳಗಾಗದಂತೆ ನೋಡಿಕೊಳ್ಳುವುದು ಸೂಕ್ತ ಎನ್ನುವ ರೀತಿಯಲ್ಲಿ ಸಲಹೆಗಳನ್ನು ನೀಡಿದರು. ಏಡ್ಸ್ ಹರಡುವ ವಿಧಿ ವಿಧಾನಗಳ ಮಾಹಿತಿಯನ್ನು ಅದರಿಂದ ದೂರವಿರುವ ಹಾಗು ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆ ಗಳ ಬಗ್ಗೆ ಮಾಹಿತಿ ನೀಡಿದರು. ಏಡ್ಸ್ ಬರುವ ಮುನ್ಸೂಚನೆಗಳ ಮಾಹಿತಿಯ ಜೊತೆಗೆ. ಮುನ್ನೆಚ್ಚರಿಕೆ ಬಗ್ಗೆ ಅರಿವಿನ ಜಾಗೃತಿಯ ಮಾಹಿತಿಗಳನ್ನ ನೀಡಿದರು. ಸರ್ಕಾರ ಏಡ್ಸ್ ನಿರ್ಮೂಲನ ಬಗ್ಗೆ ತೆಗೆದುಕೊಂಡ ಮುಂಜಾಗ್ರತಾ ಕಾರ್ಯಕ್ರಮ ಗಳ ವಿವರ ನೀಡಿದರು.
ಸಂಸ್ಥೆಯ ಸಂಸ್ಥಾಪಕರಾದ ಪಾಪಯ್ಯ ನವರು ಮಾತನಾಡಿ, ಹಿಂದಿನ ದಿನಗಳಲ್ಲಿ ಓದುವ ವಿದ್ಯಾರ್ಥಿಗಳಿಗೆ ಬಡತನದ ಕಾಟ , ಊಟ ಉಪಚಾರಗಳ ಕೊರತೆ ಇದ್ದುದ್ದನ್ನ ತಿಳಿಸಿ. ಈಗಿನ ವಿದ್ಯಾರ್ಥಿಗಳಿಗೆ ಎಲ್ಲಾ ಸೌಲಭ್ಯಗಳಿದ್ದರೂ ಓದುವ ಕಡೆ ಹೆಚ್ಚಿನ ಗಮನ ಹರಿಸು ತ್ತಿಲ್ಲ ದಿದ್ದರ ಬಗ್ಗೆ ಮಾಹಿತಿಗಳನ್ನು ನೀಡಿ. ಅದಕ್ಕೆ ಸಾಧನೆ ಬೇಕು ಅದರ ಜೊತೆಗೆ ಸಾಧನೆಯನ್ನು ಸಾಧಿಸಿದವರಿಗೆ ಮಾತ್ರ ಸನ್ಮಾನಿ ಕೊಳ್ಳುವ ಸಾಧಕ. ಅಂತವರ ಪಾಲಿಗೆ ಸೇರಿದ ಶಿಕಾರಿಪುರದ ದಂಡಾಧಿಕಾರಿ ಮಲ್ಲೇಶಪ್ಪ ಬಿ ಪೂಜಾರ್ ಎಂದು ಹೇಳಿ .ಅವರ ಶ್ರಮದ ಬಡತನದ ವಿದ್ಯಾಭ್ಯಾಸವನ್ನು ಕುರಿತು ಮಾಹಿತಿಗಳನ್ನು ನೀಡಿದರು. ಕುರಿಗಾಯಿ ಕುರುಬನೊಬ್ಬ ಕುರಿ ಕಾಯುವ ಜಾಗದಲ್ಲೇ ಮಲಗಿ ಎದ್ದು ಜೀವನ ಕಳೆದು ಅದರಲ್ಲಿ ಓದಿ ಸಮಯ ಬಂದಾಗ ಸ್ಮಶಾನದ ಗೋರಿಗಳ ಮಧ್ಯೆ ರಾತ್ರಿ ಕಳೆದ ಕಷ್ಟಪಟ್ಟು ಓದಿ ಬಡತನದ ಬೇಗೆಯಲ್ಲಿ ಬೆಂದು ಈಗ ನಮ್ಮ ಮುಂದೆ ನಗರದ ತಹಶೀಲ್ದಾರ್ ಆಗಿ ಕಾರ್ಯನಿರ್ವಸುತ್ತಿರುವುದು ನಮ್ಮ ನಿಮ್ಮ ಪುಣ್ಯ .ಅವರು ನಿಜವಾದ ಸಾಧಕ ಅವರ ಜೀವನ ನಿಮಗೆ ಮಾದರಿಯಾಗಿ ನಿಮ್ಮನ್ನು ಪ್ರೇರೇಪಣೆ ಹಾದಿಯಲ್ಲಿ ಹೋಗಲು ಅವರು ಉತ್ತಮ ನಿದರ್ಶನ ಎಂದರು.
ವೇದಿಕೆಯಲ್ಲಿ ಸಂಸ್ಥೆಯ ಪ್ರಾಂಶುಪಾಲರಾದ ಪವಿತ್ರ ಪಾಪಯ್ಯ. ಶ್ರೀಮತಿ ರತ್ನಮ್ಮ. ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ ಎಸ್ ಹುಚ್ರಾಯಪ್ಪ. ಹಿರಿಯ ಪತ್ರಕರ್ತರಾದ ಮಾಧ್ಯಮ ಮಿತ್ರ ಕೆ ಗೋಪಾಲ ಕೃಷ್ಣ ಹೆಬ್ಬಾರ್. ಆರೋಗ್ಯ ಇಲಾಖೆಯ ಹರೀಶ್ ಇತರರು ಉಪಸ್ಥಿತರಿದ್ದರು ಈ ಸಂದರ್ಭದಲ್ಲಿ ದಂಡಾಧಿಕಾರಿ ಮಲ್ಲೇಶಪ್ಪ ಬಿ ಪೂಜಾರಿ ಸಾರ್ಥಕತೆಯ ಸಾಧನೆಯನ್ನು ಗುರುತಿಸಿ ಒಬ್ಬ ನಿಷ್ಠಾವಂತ ಸಾಧಕನನ್ನ ಗುರುತಿಸಿ ಸನ್ಮಾನಿಸಲಾಯಿತು ಈ ಕೀರ್ತಿ ಬಾಪೂಜಿ ವಿದ್ಯಾಸಂಸ್ಥೆಗೆ ಹಾಗೂ ಪ್ಯಾರಾಮೆಡಿಕಲ್ ಸೈನ್ ಇನ್ಸಿಟ್ಯೂಟ್ ಗೆ ಸೇರುತ್ತದೆ ಇದೇ ಸಂದರ್ಭದಲ್ಲಿ ಏಡ್ಸ್ ಬಗ್ಗೆ ಹೆಚ್ಚಿನ ಮಾಹಿತಿಯನ್ನು ನೀಡಿದ ಡಾಕ್ಟರ್ ಸುಧಾಕರ್ ಅವರಿಗೂ ಗೌರವಿಸಲಾಯಿತು

# ಪಶ್ಚಿಮ ಘಟ್ಟದ ನದೀ ಮೂಲಗಳಿಗೆ ಜಾಥಾ, ಸಮೀಕ್ಷೆ - ವೃಕ್ಷ ಲಕ್ಷ ಆಂದೋಲನ




ಸೊರಬ : ವೃಕ್ಷ ಲಕ್ಷ ಆಂದೋಲನ, ಜೀವವೈವಿಧ್ಯ ಮಂಡಳಿ, ಪರಿಸರ ಜಾಗೃತಿ ಟ್ರಸ್ಟ್ ಹಾಗೂ ಜೀವವೈವಿಧ್ಯ ಸಮಿತಿಗಳ ಸಹಯೋಗದಲ್ಲಿ ಹಲವು ಜೀವವೈವಿಧ್ಯ ಸಂರಕ್ಷಣಾ ಕಾರ್ಯಗಳಿಗೆ ಚಾಲನೆ, ತಳಮಟ್ಟದ ಜಂಟಿ ಕಾರ್ಯಕ್ರಮಗಳು,
ಜೀವವೈವಿಧ್ಯ ಜಾಗೃತಿ ಜಾಥಾ ಇದೇ ೨೧, ೨೨ ಮೇ ೨೦೨೪ ರಂದು ಅಂತರಾಷ್ಟ್ರೀಯ ಜೀವ ವೈವಿಧ್ಯ ದಿನದ ಅಂಗವಾಗಿ ನಡೆಯಲಿದೆ.
ಜೀವ ವೈವಿಧ್ಯ ಮಂಡಳಿ, ಅರಣ್ಯ, ಕಂದಾಯ ಮುಂತಾದ ಇಲಾಖೆಗಳ ಅಧಿಕಾರಿಗಳು, ಪರಿಸರ ಕಾರ್ಯಕರ್ತರೊಂದಿಗೆ ರಚನಾತ್ಮಕ ಜೀವವೈವಿಧ್ಯ ಕಾರ್ಯಯೋಜನೆಗಳ ಕುರಿತು ಕಾರ್ಯಕ್ರಮವಿದ್ದು, ಮೇ ೨೧ ರಂದು ಬೆಳಿಗ್ಗೆ ೯ ಘಂಟೆಗೆ ಯಲ್ಲಾಪುರ ತಾಲೂಕ ಬೇಡ್ತಿ ನದೀ ಸೇತುವೆಯ ಬಳಿ ಹುಲಿಯಪ್ಪ ದೇವರ ಸನ್ನಿದಿಯಲ್ಲಿ ಜಾಥಾ ಉಧ್ಘಾಟನೆ ಆಗಲಿದೆ.
ಅಂದೇ ಬೆಳಿಗ್ಗೆ ೧೦.೩೦ ಘಂಟೆಗೆ ಶಿರಸಿಯ ಸೋಂದಾ ಸ್ವರ್ಣವಲ್ಲೀ ಮಹಾಸಂಸ್ಥಾನದಲ್ಲಿ ಕೃಷಿ ಜಯಂತಿ ನಿಮಿತ್ತ ಶ್ರೀ ಸ್ವರ್ಣವಲ್ಲೀ ಗಂಗಾಧರೇಂದ್ರ ಸರಸ್ವತೀ ಮಹಾಸ್ವಾಮಿಗಳು ದೇವರಕಾಡು ಘೋಷಣೆ, ಬೆಟ್ಟ ವನೀಕರಣ ಯೋಜನೆ ಮತ್ತು ಸಸ್ಯ ಲೋಕ ಪುನಃಶ್ಚೇತನ ಯೋಜನೆಗಳಿಗೆ ಚಾಲನೆ, ಬಿ.ಎಂ.ಸಿ. ವರದಿ ಬಿಡುಗಡೆ ಮಾಡಲಿದ್ದಾರೆ. ಈ ವೇಳೆ ಜೀವ ವೈವಿಧ್ಯ ವಿಜ್ಞಾನಿಗಳು ಪಾಲ್ಗೊಳ್ಳಲಿದ್ದಾರೆ. ತಾಲೂಕ ಪಂಚಾಯತ, ಸೋಂದಾ ಜೀವ ವೈವಿಧ್ಯ ಸಮಿತಿಯವರು ಇರುತ್ತಾರೆ.
ನಂತರ ೨ ಘಂಟೆಗೆ ವೃಕ್ಷಲಕ್ಷ ಜಾಥಾ ಸಹಸ್ರಲಿಂಗಕ್ಕೆ ಶಾಲ್ಮಲಾ ನದೀ ಪ್ರದೇಶಕ್ಕೆ ಭೇಟಿ ನೀಡಲಿದೆ. ಭೈರುಂಭೆ ಪಂಚಾಯತ ಜೀವವೈವಿಧ್ಯ ಸಮಿತಿಯವರು ಬರಲಿದ್ದಾರೆ. ಮಧ್ಯಾಹ್ನ ೩ ಘಂಟೆಗೆ ಶಿರಸಿ ಶಂಕರ ಹೊಂಡ, ಅಘನಾಶಿನಿ ನದೀ ಮೂಲಕ್ಕೆ ಭೇಟಿ ನೀಡುವ ಜೀವವೈವಿಧ್ಯ ಜಾಥಾ ಶಿರಸಿ ನಗರ ಸಭೆಯ ಜೀವವೈವಿಧ್ಯ ಸಮಿತಿ ಜೊತೆ ಸಂವಹನ ನಡೆಸಲಿದೆ.
ಮಧ್ಯಾಹ್ನ ೪.೩೦ ಘಂಟೆಗೆ ವೃಕ್ಷ ಜಾಥಾ ತಂಡ ಸಿದ್ದಾಪುರ ತಾಲೂಕ ಹಣಜೀಬೈಲ ನಾಟೀವೈದ್ಯ ಶ್ರೀ ಎಮ್.ಎನ್. ಹೆಗಡೆ ಅವರನ್ನು ಭೇಟಿ ಮಾಡಿ ಅಭಿನಂದಿಸಲಿದೆ. ಸಂಜೆ ೫.೩೦ಕ್ಕೆ ಸೊರಬ ಸಮೀಪ ದಂಡಾವತಿ ಸಂರಕ್ಷಣಾ ಅಭಿಯಾನದಲ್ಲಿ ಜಾಥಾ ಪಾಲ್ಗೊಳ್ಳಲಿದೆ. ಪರಿಸರ ಜಾಗೃತಿ ಟ್ರಸ್ಟ್ ಸದಸ್ಯರು ಇರುತ್ತಾರೆ. ವರದಾ ತೀರದ ಅಂದವಳ್ಳಿ ಅರಣ್ಯ ನಾಶ ಸ್ಥಳಕ್ಕೆ ಭೇಟಿ ನೀಡಲಿದೆ. ಗ್ರಾಮದ ಜನತೆ ಕಾನು ಅರಣ್ಯ ಸಂರಕ್ಷಣಾ ಹೋರಾಟಕ್ಕೆ ಬೆಂಬಲ ನೀಡಲಿದ್ದಾರೆ.
ಮರುದಿನ ೨೨-೫-೨೦೨೪ ರಂದು ಬೆಳಿಗ್ಗೆ ೮.೩೦ಕ್ಕೆ ವರದಹಳ್ಳಿಯ ವರದಾಶ್ರಮದ ಪವಿತ್ರ ತೀರ್ಥಕ್ಕೆ ಭೇಟಿ
ನೀಡಲಿದೆ. ದೇವರಕಾಡು ಹಾಗೂ ಗೋಶಾಲೆ, ಮಂಕಳಲೆ ಗ್ರಾಮದ ಹಸಿರು ಬೆಟ್ಟ ಪ್ರದೇಶಕ್ಕೆ ಜೀವ ವೈವಿಧ್ಯ ಕಾರ್ಯಕರ್ತರ ತಂಡ ಭೇಟಿ ನೀಡಿ ಗ್ರಾಮ ಜನರು ಹಾಗೂ ಜೀವ ವೈವಿಧ್ಯ ಸಮಿತಿ ಜೊತೆ ಬೆಟ್ಟ ರಕ್ಷಣೆಗೆ ಜೊತೆಗೂಡಲಿದೆ. ೧೦ ಘಂಟೆಗೆ ಶ್ರೀ ನಾಗೇದ್ರ ಸಾಗರ ಅವರ ಜೇನು ಸಂರಕ್ಷಣಾ ಕೇಂದ್ರಕ್ಕೆ ಭೇಟಿ ನೀಡಲಿದೆ. ವರದಾ ಮೂಲದಲ್ಲಿ ದೇವರಕಾಡು ಸಂರಕ್ಷಣಾ ಪುನರ್ ಸಂಕಲ್ಪ ಮಾಡಲಿದೆ. ಅಲ್ಲಿ ಹೆಗ್ಗೋಡು ಪಂಚಾಯತ
ಜೀವವೈವಿಧ್ಯ ಸಮಿತಿಯವರ ಭೇಟಿ ಆಗಲಿದೆ. ೧೨ ಗಂಟೆಗೆ ಹೊಸನಗರ ತಾಲೂಕಿನ ಅಮ್ಮನಘಟ್ಟಕ್ಕೆ ಭೇಟಿ ನೀಡುವ ವೃಕ್ಷ ಜಾಥಾ ಪಂಚನದಿಗಳ ಉಗಮಸ್ಥಳ ಜೀವ ವೈವಿಧ್ಯ ತಾಣದ ಸಂರಕ್ಷಣಾ ತಂತ್ರ ರೂಪಿಸಲು ವೃಕ್ಷ ವೇದಿಕೆ, ಅರಣ್ಯ ಸಮಿತಿ,
ಬಿ.ಎಂ.ಸಿ. ಜೊತೆ ಬೆಟ್ಟದ ಬುಡದಲ್ಲಿ ಸಮಾಲೋಚಿಸಲಿದೆ. ಮಧ್ಯಾಹ್ನ ೧ ಘಂಟೆಗೆ ಹುಂಚ ಪಂಚಾಯತ ಜೀವವೈವಿಧ್ಯ ಸಮಿತಿ, ಭೂಮಿ ಸಂರಕ್ಷಣಾ ಸಮಿತಿ ಜೊತೆ, ವಿ.ಎಫ್.ಸಿ. ಜೊತೆ ಕುಮದ್ವತಿ ನದೀ ಮೂಲಕ್ಕೆ ಭೇಟಿ ನೀಡಲಿದೆ. ೨.೪೫ ಘಂಟೆಗೆ ಶರಾವತಿ ನದೀ ಮೂಲದಲ್ಲಿ ಸ್ಥಳೀಯರ ಜೊತೆ ಜೀವವೈವಿಧ್ಯ ಪವಿತ್ರ ವನ ನಿರ್ಮಾಣದ ನಿರ್ಧಾರ ಮಾಡಲಿದೆ.
ಸಂಜೆ ೪-೩೦ ಕ್ಕೆ ಜಾಥಾದವರು ತೀರ್ಥಹಳ್ಳಿ ತಾಲೂಕ ಪಂಚಾಯತದಲ್ಲಿ ನದೀ ಅರಣ್ಯ,ಕಾನು ಅರಣ್ಯಗಳ ಕುರಿತು ಜಂಟಿ ಸಮಾಲೋಚನಾ ಸಭೆ ನಡೆಸಲಿದೆ. ಜಾಥಾ ಸಮಾರೋಪ ತುಂಗಾನದೀ ತೀರದಲ್ಲಿ ಪುರುಷೋತ್ತಮರಾವ್ ಕೃಷಿ ನಿವಾಸದಲ್ಲಿ ಸಂಜೆ ೬ ಘಂಟೆಗೆ ನಡೆಯಲಿದೆ.
ಬೇಡ್ತಿ ನದೀ ತೀರದಿಂದ ಆರಂಭವಾಗುವ ವೃಕ್ಷಲಕ್ಷ ಜೀವವೈವಿಧ್ಯ
ಜಾಥಾ ಶಾಲ್ಮಲಾ ಅಘನಾಶಿನಿ, ವರದಾ, ಶರಾವತಿ, ಕುಮದ್ವತಿ, ದಂಡಾವತಿ, ತುಂಗಾ ನದೀ ಮೂಲಗಳಿಗೆ, ಕಣಿವೆಗಳಿಗೆ ಭೇಟಿ ನೀಡಲಿದೆ ಎಂದು ಜೀವವೈವಿಧ್ಯ ಮಂಡಳಿ ಪ್ರಕಟಣೆಯಲ್ಲಿ ತಿಳಿಸಿದೆ.